The Mangalore Catholic Co-operative Bank Ltd.
MCC BANK
Estd - 1912
Admin. Office : M.C.C. Bank Building, St Aloysius College Road, Hampankatta, Mangaluru 575 001
Ph.: 2421369, 2445742, 2445745, Toll-Free : 1800 123 2966 Email : ho@mccbank.in Website : www.mccbank.in

Date: 29.03.2022

ಎಮ್.ಸಿ.ಸಿ. ಬ್ಯಾಂಕ್ ಸಹಕಾರ ಕ್ಷೇತ್ರದ ಬ್ಯಾಂಕುಗಳಲ್ಲಿ ಮೂಂಚೂಣಿಯಲ್ಲಿದ್ದು, ಕಳೆದ 110 ಸಾರ್ಥಕ ವರ್ಷಗಳ ಬ್ಯಾಂಕಿಂಗ್ ಸೇವೆಯನ್ನು ಒದಗಿಸುತ್ತಾ ಅಗ್ರಗಣ್ಯ ಬ್ಯಾಂಕ್ ಆಗಿ ರೂಪುಗೊಳ್ಳುವತ್ತ ದಾಪುಗಾಲು ಇಡುತ್ತದೆ.

ಬ್ಯಾಂಕ್ ಠೇವಣಿ ಸಂಗ್ರಹ, ಸಾಲ ಸೌಲಭ್ಯಗಳನ್ನು ಒದಗಿಸುವುದು ಹಾಗೂ ವರ್ಷದಿಂದ ವರ್ಷಕ್ಕೆ ಲಾಭ ಗಳಿಸುತ್ತಿದ್ದರೂ, ಕೆಲವೊಂದು ಪಟ್ಟಭದ್ರ ಹಿತಾಸಕ್ತಿಗಳು ಬ್ಯಾಂಕಿನ ಪ್ರತಿಷ್ಠೆ ಮತ್ತು ಗೌರವಕ್ಕೆ ಕಳಂಕ ತರುವ ಉದ್ದೇಶದಿಂದ ಬ್ಯಾಂಕಿನ ನಿರ್ದೇಶಕರ ಮತ್ತು ಗ್ರಾಹಕರ ಬಗ್ಗೆ ಪ್ರತಿಕಾ ಗೋಷ್ಟಿಯಲ್ಲಿ ಕ್ಷುಲ್ಲಕ ಆರೋಪಗಳನ್ನು ಮಾಡಿದ್ದು, ಖೇದಕರ ವಿಷಯವಾಗಿರುತ್ತದೆ.

ದಿನಾಂಕ 24.03.2022ರಂದು ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಸಂಪೂರ್ಣ ಸುಳ್ಳು ಮತ್ತು ದಾರಿತಪ್ಪಿಸುವ ಹೇಳಿಕೆಗಳನ್ನು ನೀಡಲಾಯಿತು. ನಾವು ಇಂತಹ ಕ್ಷುಲಕ ಮತ್ತು ಅನಗತ್ಯ ಅಡೆತಡೆಗಳಿಗೆ ವಿಚಲಿತರಾಗದೆ ನಮ್ಮ ಗೌರವಾನ್ವಿತ ಸದಸ್ಯರು ಮತ್ತು ಗ್ರಾಹಕರು ಹಾಗೂ ಹಿತೈಷಿಗಳಿಗೆ ತಿಳಿಸುವುದೇನೆಂದರೆ ಇಂತಹ ದುರುದ್ದೇಶಪೂರಿತ ಪ್ರಚಾರದ ವಿರುದ್ಧ ಕಾನೂನಾತ್ಮಕವಾಗಿ ಸಮರ್ಪಕ ಕ್ರಮ ಕೈಗೊಳ್ಳಲಾಗುವುದು.

ಪ್ರಸಕ್ತ ಆಡಳಿತ ಮಂಡಳಿಯು ಆಗಸ್ಟ್ 2018ರಿಂದ ಅಧಿಕಾರಕ್ಕೆ ಬಂದ ನಂತರ, ಅತ್ಯಧಿಕ ಠೇವಣಿ ಸಂಗ್ರಹ, ಸಾಲ ನೀಡುವಿಕೆ ಮತ್ತು ಲಾಭ ಗಳಿಕೆ, ಗ್ರಾಹಕರಿಗೆ ಹೆಚ್ಚು ಸೌಲಭ್ಯ ಒದಗಿಸುವಿಕೆ, ಹೀಗೆ ಸರ್ವತೋಮುಖ ಅಭಿವೃದ್ಧಿ ಆಗಿರುತ್ತದೆ. ಇವಲ್ಲದೆ, ಸಾಲ ವಸೂಲಾತಿ, ಮಾಹಿತಿ ತಂತ್ರಜ್ಞಾನ ಸಿಬ್ಬಂದಿ ಸೇವಾ ಸೌಲಭ್ಯಗಳ ಸುಧಾರಣೆ ಮುಂತಾದ ಕ್ಷೇತ್ರದಲ್ಲಿ ಮೂಂಚೂಣಿಯಲ್ಲಿದೆ.

ಮಾನ್ಯ ಗ್ರಾಹಕರಲ್ಲಿ ಮತ್ತು ಸಾಮಾನ್ಯ ಜನತೆಯಲ್ಲಿ ಆಡಳಿತ ಮಂಡಳಿಯು ಆಶ್ವಾಸನೆ ನೀಡುವುದೇನೆಂದರೆ, ನಮ್ಮ ಬ್ಯಾಂಕಿನ ವ್ಯವಹಾರವು ಪಾರದರ್ಶಕವಾಗಿ ನಡೆಸಲ್ಪಡುತ್ತದೆ ಹಾಗೂ ಬ್ಯಾಂಕಿನ ಆರ್ಥಿಕ ಸ್ಥಿತಿಯು ಹಿಂದಿಗಿಂತಲೂ ಬಲಿಷ್ಟವಾಗಿದ್ದು, ಆರೋಗ್ಯಕರ ತಳಹದಿಯಲ್ಲಿ ಬ್ಯಾಂಕಿನ ವ್ಯವಹಾರವು ಮುಂದುವರೆಯುತ್ತಾ ಬಂದಿದ್ದು, ಬ್ಯಾಂಕಿನಲ್ಲಿ ಸಾಕಷ್ಟು ಲಿಕ್ವಿಡಿಟಿ ಹೊಂದಿದ್ದು, ಸತತವಾಗಿ ಲಾಭ ಗಳಿಸುತ್ತಾ ಮುನ್ನಡೆಯುತ್ತಿದೆ.

ಈ ವರ್ಷವೂ ಕೂಡಾ ಬ್ಯಾಂಕ್ ಅಭಿವೃದ್ಧಿ ಪಥದಲ್ಲಿ ಸಾಗಿದ್ದು, ಸದ್ಯದಲ್ಲಿಯೇ ಪ್ರಸ್ತುತ ವರ್ಷದ ಸರ್ವತೋಮುಖ ಪ್ರಗತಿಯ ಬಗ್ಗೆ, ಅಭೂತಪೂರ್ವ ಫಲಿತಾಂಶ ಮತ್ತು ಆಧುನಿಕ ತಂತ್ರಜ್ಞಾನಗಳನ್ನೊಳಗೊಂಡ ಗ್ರಾಹಕರ ಸೇವೆಯ ಬಗ್ಗೆ ಮಾನ್ಯ ಗ್ರಾಹಕರಿಗೆ ಮತ್ತು ಸಾರ್ವಜನಿಕರಿಗೆ ತಿಳಿಸುವ ಉದ್ದೇಶದಿಂದ ಪತ್ರಿಕಾ ಪ್ರಕಟಣೆಯನ್ನು ನೀಡಲಿದ್ದೇವೆ.

ಮಹಾಪ್ರಬಂಧಕರು

ಅಧ್ಯಕ್ಷರು

(ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ)